## ಗಾಂಧಿನಗರ ಪೋಸ್ಟ್



## ಮೋಜು-ರಂಜನೆಯ 'ಹ್ಯಾಂಗೋವರ್

ವಿಠ್ಠಲ್ ಭಟ್ ನಿರ್ದೇಶನದ 'ಹ್ಯಾಂಗೋವರ್' ಚಿತ್ರೀಕರಣ ಮುಗಿಸಿದೆ. ಜೀವನದಲ್ಲಿ ಮೋಜನ್ನು ಹುಡುಕಿಕೊಂಡು ಹೋಗಿ, ವಿಚಿತ್ರ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳುವ ಮೂವರು ತರುಣರ ಜೀವನದ ಕಥೆ ಚಿತ್ರದಲ್ಲಿದೆ. ಭರಪೂರ ರಂಜನೆಯ ಈ ಥ್ರಿಲ್ಲರ್ ಕಾಮಿಡಿ ಕಥನ ಯುವಪ್ರೇಕ್ಷಕರನ್ನು ಸೆಳೆಯುವ ವಿಶ್ವಾಸ ನಿರ್ದೇಶಕರದು.

ಜಗ್ಗೇಶ್ ಅವರ ಧ್ವನಿ ಚಿತ್ರದ ವಿಶೇಷಗಳಲ್ಲೊಂದು. ಚಿತ್ರದ ಆರಂಭ ಹಾಗೂ ಅಂತ್ಯ ಎರಡರಲ್ಲೂ ಜಗ್ಗೇಶ್ ಅವರ ಧ್ವನಿ ಬಳಕೆಯಾಗಿದೆಯಂತೆ. ಚಿತ್ರದ ನಾಯಕರನ್ನು ಕೂಡ ಜಗ್ಗೇಶ್ ಪರಿಚಯಿಸುತ್ತಾರಂತೆ. ನೀತು ಅವರು ವಿಶೇಷ ಗೀತೆಯೊಂದರಲ್ಲಿ ಕಾಣಿಸಿಕೊಳ್ಳುವ ಮೂಲಕ ಚಿತ್ರದ ಗ್ಲಾಮರ್ ಹೆಚ್ಚಿಸಿದ್ದಾರೆ.

ಭರತ್, ರಾಜ್ ಹಾಗೂ ಚಿರಾಗ್ ಚಿತ್ರದ ನಾಯಕರು. ಮಹತಿ, ನಂದಿನಿ ಹಾಗೂ ಸಹನ್ ಪೊನ್ನಮ್ಮ ಚಿತ್ರದ ನಾಯಕಿಯರು. ಶಶಾಂಕ್, ರಂಜನ್, ದ್ರುಪದ್, ಸೋಹನ್ ಹಾಗೂ ಪ್ರಿಯಾಂಕ ತಾರಾಗಣದಲ್ಲಿರುವ ಪ್ರಮುಖರು. ಹೊಸ ಪ್ರತಿಭೆಗಳ ಪ್ರದರ್ಶನಶಾಲೆಯಂತೆ 'ಹ್ಯಾಂಗೋವರ್' ಕಾಣಿಸುತ್ತಿದೆ. ಈ ಹೊಸ ಪ್ರತಿಭೆಗಳೇ ನಮ್ಮ ಚಿತ್ರದ ನಿಜವಾದ ಆಕರ್ಷಣೆ ಹಾಗೂ ಶಕ್ತಿ ಎನ್ನುವುದು ನಿರ್ದೇಶಕರ ವಿಶ್ವಾಸ.

ನಿರೂಪಣೆಯಲ್ಲಿ 'ರಿವರ್ಸ್ ಸ್ಕ್ರೀನ್‌ಪ್ಲೇ' ತಂತ್ರವನ್ನು ನಿರ್ದೇಶಕರು ಅನುಸರಿಸಿದ್ದಾರೆ. ವೀರಸಮರ್ಥ್ ಸಂಗೀತ ನಿರ್ದೇಶನ ಹಾಗೂ ಯೋಗಿ ಛಾಯಾಗ್ರಹಣ ಚಿತ್ರಕ್ಕಿದೆ.

## ಹೈದರಾಬಾದ್ ರೋಮಿಯೊ!



'ರೋಮಿಯೊ ಜೂಲಿಯೆಟ್' ಪ್ರತಿ ತಲೆಮಾರಿಗೂ ಹೊಸ ರೀತಿಯಲ್ಲಿ ಕಾಣಿಸುವ ಪ್ರೇಮಕಥೆ. ಇದರ ಆಕರ್ಷಣೆಗೆ ಮರುಳಾಗಿಯೋ ಏನೋ ನಿರ್ದೇಶಕ ಭರತ್ ತಮ್ಮ ಪುತ್ರ ಧನುಶ್ ಶರಣ್ ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಲು ಹಳೆಯ ಕಥನದ ಪ್ರೇರಣೆಯನ್ನೇ ಪಡೆದುಕೊಂಡಿದ್ದಾರೆ. ಷೇಕ್ಸ್‌ಪಿಯರ್ ಸೃಷ್ಟಿಸಿದ್ದ ಪ್ರೇಮಿಗಳನ್ನು ಹೊಸಕಾಲದಲ್ಲಿ ಟ್ಟು ನೋಡುವುದು ನಿರ್ದೇಶಕರಾಗಿ ಅವರಿಗೆ ಕುತೂಹಲಕರ ಪ್ರಯೋಗ ಎನ್ನಿಸಿದೆ.

ಕಳೆದ ನಾಲ್ಕು ದಶಕಗಳಿಂದಲೂ ತೆಲುಗು ಚಿತ್ರರಂಗದಲ್ಲಿ ಗುರ್ತಿಸಿಕೊಂಡಿರುವ ಭರತ್, ತಮ್ಮ ಸಮೃದ್ಧ ಅನುಭವವನ್ನು 'ರೋಮಿಯೊ ಜೂಲಿಯೆಟ್' ಚಿತ್ರಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಸೆಟ್ಟೇರಿದ ಈ ಚಿತ್ರದ ಶೂಟಿಂಗ್ ಚಿಕ್ಕಮಗಳೂರು, ಹೈದರಾಬಾದ್ ಹಾಗೂ ಮುಂಬಯಿಗಳಲ್ಲಿ ನಡೆಯಲಿದೆ. ಈ ಮೂರೂ ಊರುಗಳು ಕನ್ನಡದ ಜೊತೆಗೆ ತೆಲುಗು ಹಾಗೂ ತೆಲುಗಿನಲ್ಲಿ ಸಿನಿಮಾ ರೂಪುಗೊಳ್ಳುತ್ತಿರುವುದನ್ನು ಸೂಚಿಸುವಂತಿದೆ.

ಧನುಶ್ ಹಾಗೂ ಸ್ವಾತಿಮಂಡ್ಲ ಚಿತ್ರದ ನಾಯಕ–ನಾಯಕಿ. ಭರತ್ ಎಂಜಿನಿಯರಿಂಗ್ ಪದವೀಧರ. ನಟನಾಗಿ ಬದುಕನ್ನು ಕಟ್ಟಿಕೊಳ್ಳಬೇಕು ಎನ್ನುವ ಉತ್ಸಾಹದಲ್ಲಿ ಅವರು ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯದ ತರಬೇತಿ ಪಡೆದಿದ್ದಾರೆ. ಅಪ್ಪನ ಗರಡಿಯಲ್ಲಿ ಬಣ್ಣ ಹಚ್ಚಿಕೊಳ್ಳುತ್ತಿರುವ ಪುಲಕ ಅವರದು.

ಸ್ವಾತಿ ಮೂಲತಃ ಬೆಂಗಾಲಿಯಾದರೂ ಕಳೆದ ಹತ್ತು ವರ್ಷಗಳಿಂದ ಹೈದರಾಬಾದ್‌ನಲ್ಲಿ ನೆಲೆಸಿದ್ದಾರೆ. ತೆಲುಗು ಕಲಿತು 'ತೆಲುಗು ಅಮ್ಮಾಯಿ' ಅನ್ನಿಸಿಕೊಂಡಿದ್ದಾರೆ. ಜೂಲಿಯೆಟ್ ಪಾತ್ರಕ್ಕಿರುವ ಚೆಲುವು ಅವರಿಗೆ ಖುಷಿಕೊಟ್ಟಿದೆ. ಲಲಿತ್ ಸುರೇಶ್ ಸಂಗೀತ ಹಾಗೂ ಬಾಲಾಜಿ ಛಾಯಾಗ್ರಹಣ ಚಿತ್ರಕ್ಕಿದೆ.